# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 05/2021

ಸಿಡಬ್ಲು: 4 / ಪಿಡಬ್ಲು: 2

ದಿನಾಂಕ: 22.02.2024

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಕಲ್ಲಪ್ಪ ಬ್ಯಾಟಣ್ಣವರ |
| ತಂದೆ ಹೆಸರು | : | ದುರಗಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ ಸ್ಥಳ | : | ಅಮರಗೋಳ ಗ್ರಾಮ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ಈಗ ತೋರಿಸಿದ ನಿಪಿ-5 ಆರೋಪಿತನು ಫಿರ್ಯಾದಿದಾರಳ ಒಪ್ಪಿಗೆಗೆ ವಿರುದ್ಧವಾಗಿ ಹುಬ್ಬಳ್ಳಿಯ ಲಾಡ್ಜುಗಳಲ್ಲಿ ಅತ್ಯಾಚಾರ ಮಾಡಿ ಜಾಗೆಯ ಪಂಚನಾಮೆಯ ಮೇಲೆ ನನ್ನ ಸಹಿ ಇರುತ್ತದೆ. **ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.**

2. ನಾನು ಹುಬ್ಬಳ್ಳಿಯ ಸಿದ್ಧಾರೂಢ ಮಠಕ್ಕೆ ಹೋದಾಗ ಪೋಲೀಸರು ನನ್ನ ಸಹಿಯನ್ನು ನಿಪಿ-5 ಕ್ಕೆ ಪಡೆದುಕೊಂಡಿರುತ್ತಾರೆ. ನಾನು ನಿಪಿ-5 ಕ್ಕೆ ಯಾವಾಗ ಸಹಿ ಮಾಡಿದ್ದೇನೆ ಎಂದು ನನಗೆ ಈಗ ನೆನಪಿರುವುದಿಲ್ಲ. ಆದರೆ ಹುಬ್ಬಳ್ಳಿಯ ಸಿದ್ಧಾರೂಢ ಮಠದ ಹತ್ತಿರ ಇರುವ ಬೃಂದಾವನ ಲಾಡ್ಜಿನಲ್ಲಿ ನಿಪಿ-6 ರಂತೆ ಫೋಟೋವನ್ನು ಹಾಗೂ ಹುಬ್ಬಳ್ಳಿಯ ಹೊಸ ಬಸ್ ನಿಲ್ದಾಣದ ಎದುರಿಗೆ ಇರುವ ಒಂದು ಲಾಡ್ಜಿನಲ್ಲಿ ನಿಪಿ-7 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ. ನಿಪಿ-6 ಮತ್ತು 7 ರ ಕ್ರಮ ಸಂಖ್ಯೆ: 3 ರಲ್ಲಿ ನನ ಭಾವ ಚಿತ್ರಗಳು ಇರುತ್ತವೆ. ಪಂಚನಾಮೆ ಇದೆ ಎಂದು ಪೋಲೀಸರು ನನ್ನನ್ನು ಸದರಿ ಲಾಡ್ಜುಗಳಿಗೆ ಕರೆದುಕೊಂಡು ಹೋಗಿದ್ದರು. ಆ ಸಮಯದಲ್ಲಿ ನನ್ನ ಜೊತೆ ಬೇರೆ ಯಾರು ಇದ್ದರು ಎಂದು ಅವರ ಹೆಸರನ್ನು ಹೇಳಲು ನನಗೆ ಆಗುವುದಿಲ್ಲ.

3. ಸದರಿ ಲಾಡ್ಜುಗಳಲ್ಲಿ ಯಾರಿಗೆ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಲಾಡ್ಜುಗಳಲ್ಲಿನ ಯಾವ ನಂಬರಿನ ರೂಮುಗಳಲ್ಲಿ ಫೋಟೋಗಳನ್ನು ತೆಗೆಯಲಾಗಿರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ-6 ಮತ್ತು 7 ನ್ನು ತೆಗೆಯುವಾಗ ಪೋಲೀಸರ ಜೊತೆ ಯಾರು ಇದ್ದರು ಎಂದು

ನನಗೆ ಹೇಳಲು ಆಗುವುದಿಲ್ಲ. ನಿಪಿ-6 ಮತ್ತು 7 ರಲ್ಲಿ ಒಬ್ಬ ಮಹಿಳೆಯ ಭಾವಚಿತ್ರ ಇರುತ್ತದೆ, ಆದರೆ ಆಕೆ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಮಹಿಳೆಯ ಹೆಸರು ನನಗೆ ಗೊತ್ತಿಲ್ಲ. ಸದರಿ ಮಹಿಳೆಯು ಪೋಲೀಸರ ಜೊತೆ ಯಾಕೆ ಬಂದಿದ್ದಳು ಎಂದು ನನಗೆ ಗೊತ್ತಿಲ್ಲ. ಸದರಿ ಮಹಿಳೆಗೆ ಏನಾಗಿತ್ತು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಸ್ಥಳವನ್ನು  ಯಾರು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಪೋಲೀಸರು ತೋರಿಸಿರುತ್ತಾರೆ ಎಂದು ಹೇಳಿರುತ್ತಾರೆ.

4. ಸದರಿ ಲಾಡ್ಜುಗಳಲ್ಲಿ ಪೋಲೀಸರು ಪರಿಶೀಲನೆ ಮಾಡಿ ಯಾವುದಾದರೂ ದಾಖಲೆಗಳನ್ನು ತೆಗೆದುಕೊಂಡಿದ್ದಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ-5 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-5 ಪಂಚನಾಮೆ ಮಾಡಿದ ದಿನಾಂಕ ಮತ್ತು ಸಮಯವನ್ನು ನನಗೆ ಹೇಳಲು ಆಗುವುದಿಲ್ಲ.

**(ಈ ಹಂತದಲ್ಲಿ, ಸರ್ಕಾರಿ ಅಭಿಯೋಜಕರು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದರಿಂದ, ಅನುಮತಿಸಲಾಯಿತು.)**

## ಪಾಟಿ ಸವಾಲುಃ  ಪಿಪಿಯವರಿಂದಃ

5.  ದಿನಾಂಕಃ  29.09.2020 ರಂದು, ನನ್ನನ್ನು ಹಾಗೂ ಚಾಸಾ-2 ರವರನ್ನು ಪೋಲೀಸರು ಕರೆಸಿಕೊಂಡಿದ್ದು, ಅಲ್ಲಿ ಪ್ರಾಸಾ-1 ರವರು ಹಾಜರ ಇದ್ದು, ಅವರು  ಬೃಂದಾವನ ಲಾಡ್ಜಿನ ರೂಮ ನಂ. 303 ಗೆ ಕರೆದುಕೊಂಡು ಹೋಗಿ ಅಲ್ಲಿ  ತನ್ನ ಮೇಲೆ ಆರೋಪಿಯು ಅತ್ಯಾಚಾರ ಮಾಡಿರುತ್ತಾನೆ ಎಂದು ತೋರಿಸಿರುತ್ತಾಳೆ ಮತ್ತು ಅದೇ ಲಾಡ್ಜಿನಲ್ಲಿಯ ದಾಖಲೆಗಳನ್ನು ಪೋಲೀಸರು ಪರಿಶೀಲನೆ ಮಾಡಿದಾಗ, ದಿಃ 12.03.2020 ರಾತ್ರಿ 10.50 ರಿಂದ ದಿಃ 13.03.2020 ರ ಮದ್ಯಾಹ್ನ 12.50 ರ ವರೆಗೆ ಸದರಿ ದಾಖಲೆಯಲ್ಲಿ ಆರೋಪಿ ಮತ್ತು ಪ್ರಾಸಾ-1 ರವರು ಇದ್ದ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ ಮತ್ತು ಅಲ್ಲಿ ಮದ್ಯಾಹ್ನ 02.30 ರಿಂದ 03.30 ರ ವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.  ಬೃಂದಾವನ ಲಾಡ್ಜಿನಲ್ಲಿ  ನಿಪಿ-6 ರಂತೆ ಫೋಟೋವನ್ನು ತೆಗೆದಿರುತ್ತಾರೆ ಎಂದರೆ ಸರಿ.

6. ಬೃಂದಾವನ ಲಾಡ್ಜಿನಲ್ಲಿ ಪಂಚನಾಮೆ ಮಾಡಿದ ನಂತರ ಪ್ರಾಸಾ-1 ರವರು ಹುಬ್ಬಳ್ಳಿಯ ಗೋಕುಲ ರಸ್ತೆಯಲ್ಲಿರುವ ಹರಿಪ್ರಸಾದ ಲಾಡ್ಜಿಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ರೂಮ್ ನಂ. 318  ನ್ನು ತೋರಿಸಿ, ಅಲ್ಲಿ  ಆರೋಪಿಯು ತನ್ನ ಮೇಲೆ ಅತ್ಯಾಚಾರ ಮಾಡಿರುತ್ತಾನೆ ಎಂದು ತೋರಿಸಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಹರಿಪ್ರಸಾದ ಲಾಡ್ಜಿನಲ್ಲಿ  ನಿಪಿ-7 ರಂತೆ ಫೋಟೋವನ್ನು ತೆಗೆದಿರುತ್ತಾರೆ ಎಂದರೆ ಸರಿ.

7. ಹರಿಪ್ರಸಾದ ಲಾಡ್ಜಿನಲ್ಲಿ ದಿಃ 08.06.2020 ರಂದು ರಾತ್ರಿ 09.45 ರಿಂದ ದಿಃ 09.06.2020 ರಂದು ರಾತ್ರಿ 08.30 ರ ವರೆಗೆ ಆರೋಪಿ ಮತ್ತು ಪ್ರಾಸಾ-1 ರವರು ಇದ್ದ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ ಮತ್ತು ಅಲ್ಲಿ ಮದ್ಯಾಹ್ನ 04.00 ರಿಂದ 05.00 ರ ವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8. ನನ್ನ ಸಮಕ್ಷಮ ನಿಪಿ-5 ರಂತೆ ಪಂಚನಾಮೆ ಮಾಡಿದ್ದರೂ ಮತ್ತು ಪಂಚನಾಮೆ ಕಾಲಕ್ಕೆ ನಿಪಿ6 ಮತ್ತು 7 ರಂತೆ ಫೋಟೋ ತೆಗೆದಿದ್ದರೂ ಕೂಡಾ ಈಗ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಶ್ರೀ ಎಸ್.ಬಿ. ಘಟ್ಟಿರೆಡ್ಡಿಹಾಳ, ಆರೋಪಿ ಪರ ವಕೀಲರಿಂದಃ</u>**

**9.** ಪೋಲೀಸರು ನನಗೆ ಯಾವುದೇ ವಿಷಯವನ್ನು ಹೇಳಿರುವುದಿಲ್ಲ. ಅಲ್ಲಿ ನಡೆದ ಘಟನಾವಳಿಗಳ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-6 ಮತ್ತು 7 ಗಳನ್ನು ತಗೆಯುವಾಗ ಏತಕ್ಕಾಗಿ ಫೋಟೋಗಳನ್ನು ತೆಗೆಯಲಾಗುತ್ತಿದೆ ಎಂದು ನನಗೆ ಹೇಳಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಲಾಡ್ಜಿನ ದಾಖಲೆಗಳನ್ನು ತೋರಿಸಿರುವುದಿಲ್ಲ. ನಿಪಿ-5 ನ್ನು ಬರೆದ ನಂತರ ನನಗೆ ಓದಿ ಹೇಳಿರುವುದಿಲ್ಲ ಆದರೆ ಅದನ್ನು ಬರೆದ ನಂತರ ಸಹಿ ಮಾಡಲು ಹೇಳಿದ್ದರಿಂದ ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

**<u>ಮರು ವಿಚಾರಣೆ – ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**